ಈ ಮೇಲಿನ ಅಂಕಿ ಅಂಶಗಳಿಂದ ಕೊಬ್ಬರಿ ಬೆಲೆಯು ಕೇಂದ್ರ ಸರ್ಕಾರವು ಘೋಷಿಸಿದ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಇರುವುದು ಸ್ಪಷ್ಟವಾಗುತ್ತದೆ.

ಆ) ಹೌದು,

2010–11ನೇ ಸಾಲಿನಲ್ಲಿ ಉಂಡೆ ಕೊಬ್ಬರಿ ಬೆಲೆ ಕುಸಿತಕ್ಕೊಳಗಾಗಿರುವುದರಿಂದ, ಕೊಬ್ಬರಿ ಬೆಳೆಗಾರರ ಹಿತದೃಷ್ಟಿಯಿಂದ ಭಾರತ ಸರ್ಕಾರವು ಘೋಷಿಸಿದ ಎಫ್.ಎ.ಕ್ಯೂ. ಗುಣಮಟ್ಟದ ಕೊಬ್ಬರಿಗೆ ಪ್ರತೀ ಕ್ವಿಂಟಾಲ್‌ಗೆ ರೂ.4,700/–ರಂತೆ ಭಾರತ ಸರ್ಕಾರದ ನ್ಯಾಫೆಡ್ ಸಂಸ್ಥೆಯ ಮುಖಾಂತರ ಖರೀದಿಸಲು ರಾಜ್ಯ ಸರಕಾರವು ಆದೇಶಿಸಿರುತ್ತದೆ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು ಇವರು ರಾಜ್ಯ ನೋಡೆಲ್ ಏಜೆನ್ಸೀಯಾಗಿ ಕಾರ್ಯನಿರ್ವಹಿಸುತ್ತಿದೆ.

ಕೃಷಿ ಉಪಕರಣಗಳಿಗೆ ರಿಯಾಯಿತಿ

215(588) ಶ್ರಿ ಸಿದ್ದು ಸವದಿ:(ತೇರದಾಳ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010–11ನೇ ಸಾಲಿಗೆ ಕೃಷಿ ಉಪಕರಣಗಳು ಮತ್ತು ಬೀಜ, ಗೊಬ್ಬರ, ಕ್ರಿಮಿನಾಶಕ ಹಾಗೂ ಹನಿ ನೀರಾವರಿ ಮತ್ತು ಟ್ರಾಕ್ಟರ್‌ಗಳಿಗೆ ಗೊತ್ತುಪಡಿಸಿದ ರಿಯಾಯಿತಿ ಪ್ರಮಾಣಗಳೆಷ್ಟು; (ಪ್ರತ್ಯೇಕವಾಗಿ ಸಂಪೂರ್ಣ ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಿಂದ ಕೃಷಿ ಉಪಕರಣಗಳು ಮತ್ತು ಬೀಜ ಗೊಬ್ಬರಕ್ಕೆ ಹಾಗೂ ಹನಿ ನೀರಾವರಿ ಸೇರಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡು ನೀಡಿರುವ ಸಬ್ಸಿಡಿಗಳ ಪ್ರಮಾಣವೆಷ್ಟು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಸಚಿವರು):

ಅ) I. ಕೃಷಿ ಉಪಕರಣ,

2010–11ನೇ ಸಾಲಿನಲ್ಲಿ ಕೃಷಿ ಉಪಕರಣಗಳನ್ನು ಕೃಷಿ ಇಲಾಖೆಯ ದರ ಕರಾರಿನಲ್ಲಿ ಅನುಮೋದಿತ ಕನಿಷ್ಠ ದರದ ಶೇ.50 ಅಥವಾ ಇಲಾಖೆ ವತಿಯಿಂದ ನಿಗಧಿಪಡಿಸಿದ ಗರಿಷ್ಠ ಸಹಾಯಧನ ಒದಗಿಸಲಾಗಿದೆ.(ಅನುಬಂಧ–I)

II. ಬಿತ್ತನೆ ಬೀಜ

2010ರ ಮುಂಗಾರು ಹಂಗಾಮಿನಲ್ಲಿ ಶೇ.50 ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದೆ. ಬೆಳೆವಾರು ಪ್ರತಿ ಕೆ.ಜಿ.ಗೆ ಗೊತ್ತುಪಡಿಸಿರುವ ರಿಯಾಯಿತಿ ಪ್ರಮಾಣದ ವಿವರಗಳನ್ನು ಅನುಬಂಧ–II ರಲ್ಲಿ ನೀಡಲಾಗಿದೆ.

III. ರಸಗೊಬ್ಬರ

ರಸಗೊಬ್ಬರ ರಿಯಾಯಿತಿಯು ಕೇಂದ್ರ ಸರ್ಕಾರದ ನಿಯಮಾವಳಿಗೆ ಸಂಬಂಧಿಸಿದ್ದು, ಅಲ್ಲದೆ, ಸಬ್ಸಿಡಿ ದರವನ್ನು ಕೇಂದ್ರ ಸರ್ಕಾರವೇ ನಿರ್ಧರಿಸಿ ನೇರವಾಗಿ ರಸಗೊಬ್ಬರ ತಯಾರಕ ಕಂಪನಿಗಳಿಗೆ ನೀಡುತ್ತದೆ.

IV. ಕ್ರಿಮಿನಾಶಕ

2010–11ನೇ ಸಾಲಿಗೆ ಪೀಡೆನಾಶಕಗಳಿಗೆ ಶೇ.50ರಂತೆ (ಪ್ರತಿ ಹೆಕ್ಟೇರಿಗೆ ಗರಿಷ್ಟ ರೂ.500/–ಮೀರದಂತೆ) ರಿಯಾಯಿತಿಯನ್ನು ನಿಗದಿಪಡಿಸಲಾಗಿದೆ.

V. ಹನಿ ನೀರಾವರಿ

2010–11ನೇ ಸಾಲಿನಲ್ಲಿ ಹನಿ ನೀರಾವರಿ ಘಟಕಗಳಿಗೆ ಶೇ. 60ರಷ್ಟು ಸಹಾಯ ಧನವನ್ನು ಒದಗಿಸಲು. ರಾಜ್ಯಮಟ್ಟದ ಲಘು ನೀರಾವರಿ ಸಮಿತಿಯ 5ನೇ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಈ ಕುರಿತು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

VI. ಟ್ರಾಕ್ಟರ್

ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 09.04.10 ರನ್ವಯ 2010–11ನೇ ಸಾಲಿನಲ್ಲಿ ಟ್ರಾಕ್ಟರಿಗೆ ಸಹಾಯಧನ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ.

ಆ) I ಕೃಷಿ ಉಪಕರಣ,

2007–08 ಹಾಗೂ 2008–09ನೇ ಸಾಲುಗಳಲ್ಲಿ ಕೃಷಿ ಉಪಕರಣಗಳಿಗೆ ಶೇ.50ರ ಅಥವಾ ಇಲಾಖೆಯಿಂದ ನಿಗಧಿಪಡಿಸಲಾದ ಸಹಾಯಧನದ ಮೊತ್ತ ಯಾವುದು ಕಡಿಮೆಯೋ ಅದನ್ನು ನೀಡಲಾಗುತ್ತಿದೆ. ಶೇ 25% ಸಹಾಚುಧನವನ್ನು ಕೇಂದ್ರದ ಪಾಲಿನಿಂದ ಮತ್ತು ಉಳಿದ ಶೇ 25% ರಾಜ್ಯ ಪಾಲಿನಿಂದ ಒದಗಿಸಲಾಗಿರುತ್ತದೆ.

2009–10ನೇ ಸಾಲಿನಲ್ಲೂ ಸಹ ಕೃಷಿ ಉಪಕರಣಗಳಿಗೆ ಕನಿಷ್ಠ ದರದ ಶೇ.50ರ ಅಥವಾ ಇಲಾಖೆಯಿಚಿದ ನಿಗಧಿಪಡಿಸಲಾದ ಸಹಾಚಿುಧನದ ಮೊತ್ತ ಯಾವುದು ಕಡಿಮೆಯೋ ಅದನ್ನು ನೀಡಲಾಗುತ್ತಿದೆ. ವರ್ಕ ಪ್ಲಾನ್ ಮಾರ್ಗಸೂಚಿ ಅನ್ವಯ ನೀಡಬಹುದಾದ ಗರಿಷ್ಠ ಸಹಾಯಧನವನ್ನು ಕೇಂದ್ರದ ಪಾಲಿನಿಂದ ಮತ್ತು ಉಳಿದ ಸಹಾಯಧನವನ್ನು ರಾಜ್ಯದ ಪಾಲಿನಿಂದ ಒದಗಿಸಲಾಗಿರುತ್ತದೆ.

II. ಬಿತ್ತನೆ ಬೀಜ

2007–08 ರಿಂದ 2009–10ರ ವರೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ನೀಡಲಾಗಿರುವ ಸಬ್ಸಿಡಿಯ ವಿವರ ಕೆಳಕಂಡಂತಿದೆ.

ರಾಜ್ಯವಲಯ: ರಾಜ್ಯ ಸರ್ಕಾರದ ಯೋಜನೆಯಾದ, ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕಾರ್ಯಕ್ರಮದಡಿಯಲ್ಲಿ ನೀಡಲಾಗುವದ ರಿಯಾಯಿತಿ ಪ್ರಮಾಣದ ವಿವರ ಕೆಳಕಂಡಂತಿದೆ.

2007–08ನೇ ಸಾಲಿನಲ್ಲಿ L1 ದರದ ಶೇ. 75 ರಂತೆ,

2008–09ನೇ ಸಾಲಿನಲ್ಲಿ L1 ದರದ ಶೆ. 50 ರಂತೆ,

2009–10ನೇ ಸಾಲಿನಲ್ಲಿ ಬಿತ್ತನೆ ಬೀಜದ ಮಾರಾಟ ದರದ ಶೇ. 50ರಂತೆ, ಹಿಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಕಂಡುಬಂದ ಬರ/ನೆರೆಪೀಡಿತ ತಾಲ್ಲೂಕುಗಳಲ್ಲಿ ಬಿತ್ತನೆ ಬೀಜದ ಮಾರಾಟ ದರದ ಶೇ. 75 ರಂತೆ ರಿಯಾಯಿತಿ ಪ್ರಮಾಣ ನೀಡಲಾಗಿದೆ.

ಕೇಂದ್ರವಲಯ: ಕೇಂದ್ರ ಸರ್ಕಾರದ ಯೋಜನೆಗಳಾದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಹಾಗೂ ಪ್ರಾಧನ ಮಂತ್ರಿಗಳ ಪುನರ್ವಸತಿ ಪ್ಯಾಕೇಜ್ (6 ಜಿಲ್ಲೆಗಳಲ್ಲಿ) ಕಾರ್ಯಕ್ರಮದಡಿಯಲ್ಲಿ ಶೇ. 50ರ ಪ್ರಮಾಣದಲ್ಲಿ ಶೇ. 50ರ ಪ್ರಮಾಣದಲ್ಲಿ ರಿಯಾಯಿತಿ ನೀಡಲಾಗಿದೆ.

ಒಟ್ಟಾರೆ ರಾಜ್ಯದಲ್ಲಿ ಏಕರೂಪದ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸಲಾಗುತ್ತಿದೆ.

III. ರಸಗೊಬ್ಬರ

ರಾಜ್ಯ ಸರ್ಕಾರವು ರಸಗೊಬ್ಬರಗಳಿಗೆ ಯಾವುದೆ ಸಬ್ಸಿಡಿ ನೀಡುವುದಿಲ್ಲ. ಕೇಂದ್ರ ಸರ್ಕಾರವು ರಸಗೊಬ್ಬರ ಸಬ್ಸಿಡಿಯನ್ನು ನೇರವಾಗಿ ರೈತರಿಗೆ ನೀಡದೆ,

ರಸಗೊಬ್ಬರ ತಯಾರಕರಿಗೆ ನೀಡಿ ರಸಗೊಬ್ಬರಗಳು ಕಡಿಮೆ ದರದಲ್ಲಿ ರೈತರಿಗೆ ದೊರೆಯುವಂತೆ ಕಲ್ಪಿಸಿದೆ.

IV. ಹನಿ ನೀರಾವರಿ

2007–08, 2008–09 ಮತ್ತು 2009–10ನೇ ಸಾಲುಗಳಲ್ಲಿ ಕೇಂದ್ರ ಪುರಸ್ಕೃತ ಲಘು ನೀರಾವರಿ ಯೋಜನೆಯಡಿ, ಲಘು ನೀರಾವರಿ ಘಟಕಗಳಾದ ಹನಿ ಮತ್ತು ತುಂತುರು ನೀರಾವರಿ ಘಟಕಗಳಿಗೆ ಕೇಂದ್ರ ಸರ್ಕಾರದ ಶೇ.40 ರ ಸಹಾಯಧನಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಶೇ. 35 ರ ಸಹಾಯಧನವನ್ನು ಒಟ್ಟು ಶೇ 75 ರಷ್ಟು ಸಹಾಯಧನವನ್ನು ಗರಿಷ್ಠ 2ಹೆ ಪ್ರದೇಶಕ್ಕೆ ಒದಗಿಸಲಾಗಿರುತ್ತದೆ.

ಅನುಬಂಧ–I

2010–11ನೇ ಸಾಲಿನಲ್ಲಿ (ಇಲ್ಲಿಯವರೆಗೆ) ಕೃಷಿ ಉಪಕರಣಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡು ಸೇರಿ ನೀಡಿರುವ ಸಹಾಯಧನದ ಪ್ರಮಾಣದ ವಿವರ

ಕ್ರ. ಸಂ.	ಘಟಕ	ರಿಯಾಯಿತಿ		ಸಹಾಯಧನದ ಮೊತ್ತ
		ವರ್ಕ್ ಪ್ಲಾನ್ ಕೇಂದ್ರದ ಪಾಲು	ರಾಜ್ಯದ ಪಾಲು	
1	ಸಣ್ಣ ಟ್ರ್ಯಾಕ್ಟರ್	ಶೇ. 25 ಅಥವಾ ಗರಿಷ್ಠ ರೂ.45000/–	ಉಳಿದ ಸಹಾಯಧನದ ಮೊತ್ತ ಗರಿಷ್ಠ ರೂ.6000/–ರಾಜ್ಯವಲಯದಿಂದ ಪೂರಕವಾಗಿ	ಗರಿಷ್ಠ ರೂ.60000/–
2	ಪವರ್ ಟಿಲ್ಲರ್	ಶೇ. 40 ಅಥವಾ	ಉಳಿದ ಸಹಾಯಧನದ	ಶೇ.50 ಗರಿಷ್ಠ

		ಗರಿಷ್ಠ 45000/–	ಮೊತ್ತ ಗರಿಷ್ಠ ರೂ.50000/– ರಾಜ್ಯದ ಪಾಲಿಗೆ ಹೊಂದಾಣಿಕೆಯ ತಾಗಿ	50000/–
3	ಸ್ವಯಂ ಚಾಲಿತ, ರೀಪರ್, ಭತ್ತ ನಾಟಿ ಮಾಡುವ ಯಂತ್ರಗಳು	ಶೇ.25 ಗರಿಷ್ಠ ರೂ.40000/ –	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
4.	ಶಕ್ತಿ ಚಾಲಿತ ವಿಶೇಷ ಯಂತ್ರಗಳು	ಶೇ.25 ಗರಿಷ್ಠ ರೂ.15000/ –	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
5.	ಶಕ್ತಿ ಚಾಲಿತ ವಿಶೇಷ ಯಂತ್ರಗಳು	ಶೆ.40 ಗರಿಷ್ಠ ರೂ.20000/ –	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
6.	ಮಾನವ ಚಾಲಿತ ಉಪಕರಣಗಳು/ಸಾಧನ ಗಳು ,	ಶೇ.25 ಗರಿಷ್ಠ ರೂ.2000/ –	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
7.	ಪ್ರಾಣಿ ಚಾಲಿತ ಉಪಕರಣಗಳು	ಶೇ.25 ಗರಿಷ್ಠ ರೂ.2500/–	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
8.	ಎತ್ತು ಚಾಲಿತ	ಶೇ.25	ಶೇ.50	ಕನಿಷ್ಠ

	ಉಪಕರಣಗಳು ಸಾಧನಗಳು	ಗರಿಷ್ಠ ರೂ.6000/–	ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ದರದ ಶೇ.50
9	ಟ್ರ್ಯಾಕ್ಟರ್/ಟಿಲ್ಲರ್ ಚಾಲಿತ ವಿಶೇಷ ಯಂತ್ರಗಳು	ಶೇ.25. ಗರಿಷ್ಠ ರೂ.10000/ –	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
10	ಒಕ್ಕಣೆ ಯಂತ್ರಗಳು	ಶೇ.25 ಗರಿಷ್ಠ ರೂ.12000/ –	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
11	ಡೀಸೆಲ್ ಪಂಪ್ ಸೆಟ್‌ಗಳು	ಶೆ.50 ಗರಿಷ್ಠ ರೂ.10000/ –(7.5 ಹೆಚ್. ಪಿ ವರೆಗೆ)	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
12	ಕೋನೊ ವೀಡರ್	ಶೇ.50 ಅಥವಾ ಗರಿಷ್ಠ ರೂ.3000/– ಯಾವುದು ಕಡಿಮೆಯೋ ಅದು	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50
13	ಸಸ್ಯ ಸಂರಕ್ಷಣಾ ಉಪಕರಣಗಳು	ಶೇ.25 ಗರಿಷ್ಠ ರೂ.25000/ –	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ	ಕನಿಷ್ಠ ದರದ ಶೇ.50

14	ಕಂಬೈನ್ಡ್ ಹಾರ್ವೆಸ್ಟರ್ಸ್	ಶೇ.25 ಅಥವಾ ಗರಿಷ್ಠ ರೂ.150000 /– ಯಾವುದು ಕಡಿಮೆಯೋ ಅದು	ಶೇ.50 ರಿಯಾಯಿತಿಗೆ ವ್ಯತ್ಯಾಸದ ಮೊತ್ತ ಅಥವಾ ಗರಿಷ್ಠ ರೂ. 300000/–	ಕನಿಷ್ಠ ದರದ ಶೇ.50 ಅಥವಾ ಗರಿಷ್ಠ ರೂ. 300000/ –

ಅನುಬಂಧ- II

2010ರ ಮುಂಗಾರು ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಲ್ಲಿ ಬಿತ್ತನೆ ಬೀಜ ವಿತರಣೆಗೆ ನೀಡಲಾಗುವ ರಿಯಾಯಿತಿ ದರ (ರೂ.ಗಳಲ್ಲಿ – ಪ್ರತಿ ಕೆ.ಜಿ.ಗೆ)

ಕ್ರ.ಸಂ.	ಬೆಳೆ	ವಿವರ	ರಿಯಾಯಿತಿ ದರ
1	ಭತ್ತ	ಸಾರ್ವಜನಿಕ ತಳಿ	10.00
	ಸಂಕರ ಬತ್ತ	ಸಂಕರ ತಳಿಗಳಿಗೆ	77.50
2	ರಾಗಿ	ಸಾರ್ವಜನಿಕ ತಳಿ	10.50
3	ತೊಗರಿ	ಸಾರ್ವಜನಿಕ ತಳಿ	40.00
4	ಉದ್ದು	ಸಾರ್ವಜನಿಕ ತಳಿ	45.00
5	ಹೆಸರು	ಸಾರ್ವಜನಿಕ ತಳಿ	40.00
6	ಅಲಸಂದೆ	ಸಾರ್ವಜನಿಕ ತಳಿ	25.00
7	ಹರಳು	ಸಾರ್ವಜನಿಕ ತಳಿ	32.00
		ಸಾರ್ವಜನಿಕ ಸಂಕರ	55.00
8	ನೆಲಗಡಲೆ	ಕಾಯಿ	12.00
9	ಸೂರ್ಯಕಾಂತಿ	ಸಾರ್ವಜನಿಕ ತಳಿ	37.50
		ಸಂಕರ ತಳಿಗಳು	80.00
10	ಸೋಯಅವರೆ	ಸಾರ್ವಜನಿಕ ತಳಿ	12.00

11	ಮೆಕ್ಕೆಜೋಳ	ಸಾರ್ವಜನಿಕ ತಳಿ	14.50
		ಸಂಕರ ತಳಿಗಳಿಗೆ	25.00
12	ಸಜ್ಜೆ	ಸಾರ್ವಜನಿಕ ತಳಿ	9.25
		ಸಂಕರ ತಳಿಗಳಿಗೆ	43.00
13	ಜೋಳ	ಸಂಕರ ತಳಿಗಳಿಗೆ	22.50

ರಾಜ್ಯ ಹೆದ್ದಾರಿಗಳ ದುರಸ್ತಿ

216(559) ಶ್ರೀ ಸಿದ್ದು ಸವದಿ:(ತೇರದಾಳ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ–ನಿಪ್ಪಾಣಿ ಮತ್ತು ಜಮಖಂಡಿ ಕಾಗವಾಡ ರಾಜ್ಯ ಹೆದ್ದಾರಿಗಳೆರಡೂ ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮವೇನು;

ಆ) ಈ ಎರಡೂ ರಸ್ತೆಗಳು ಕೇಶಿಫ್‌ನಲ್ಲಿ ಮಂಜೂರಾಗಿರುವುದು ನಿಜವೇ; ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಈ ಸಂಬಂಧದಲ್ಲಿ ಟೆಂಡರ್ ಕರೆಯಲಾಗಿದೆಯೇ;

ಈ) ಹಾಗಿದ್ದಲ್ಲಿ, ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಹಾಗೂ ಅಲ್ಲಿಯವರೆಗೆ ಈ ರಸ್ತೆಗಳ ದುರಸ್ತಿಗೆ ಕೈಗೊಳ್ಳುವ ಕ್ರಮವೇನು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಜಮಖಂಡಿಯಿಂದ ತೇರದಾಳ–ಕುಡುಚಿ ಮನಗಸುಳಿ–ಮಹಾರಾಷ್ಟ್ರಗಡಿವರೆಗಿನ 79 ಕಿಮೀ. ರಸ್ತೆ ಹಾಗೂ ಮುಧೋಳದಿಂದ ಮಾಲಿಂಗಪುರ ಕಬ್ಬೂರು ಮಾರ್ಗವಾಗಿ ನಿಪ್ಪಾಣಿವರೆಗಿನ 108 ಕಿ.ಮೀ. ರಸ್ತೆ ಅಭಿವೃದ್ಧಿಯನ್ನು ಕೆಶಿಫ್–II ಯೋಜನೆಯಡಿಯಲ್ಲಿ ಸೇರಿಸಲಾಗಿದೆ.

ಆ) ಮುಧೋಳದಿಂದ–ಮಹಾಲಿಂಗಪುರ–ಕಬ್ಬೂರು–ಚಿಕ್ಕೋಡಿ–ನಿಪ್ಪಾಣಿ (NH-4) ವರೆಗಿನ ರಸ್ತೆಯನ್ನು Annuity ಗುತ್ತಿಗೆ ಆಧಾರದಲ್ಲಿ